ನೆವಂಗೆ ಸಲ್ಲಿಸಿಲ್ಲ ಮತ್ತು ಈ ಬಗ್ಗೆ ಆಕ್ಷೇಪಣೆಯಂನ್ನು ಯಾರೂ ಕೂಡ ಎತ್ತಲಿಲ್ಲ. ಮುನ್ಸೀಫ್ ಕೋರ್ಟ್‌ನ ಸ್ಥಾಪನೆ ಮಾಡುವುದಾದರೆ ಎಲ್ಲಿ ಮಾಡಬೇಕು ಎಂಬ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಎಲ್ಲಿ ಕೇಸಸ್ ಜಾಸ್ತಿ ಇದೆ ಎಂದು ಹೈಕೋರ್ಟಿನವರು ಜಿಲ್ಲಾ ನ್ಯಾಯಾಧೀಶರಿಂದ ವರದಿಯನ್ನು ತರಿಸಿ ನೋಡಂತ್ತಾರೆ. ನಂತರ ಈ ಬಗ್ಗೆ ಅವರು ವಿಚಾರ ಮಾಡಿ ಅಲ್ಲಿ ಮಾಡಬೇಕಾದುದು ಅವಶ್ಯ ಎಂದು ಕಂಡು ಬಂದರೆ ಹೈಕೋರ್ಟಿನವರು ಸರ್ಕಾರಕ್ಕೆ ಪ್ರಸ್ತಾಪವನ್ನು ಕಳಿಸುತ್ತಾರೆ. ಆಗ ನಾವು ಮಂಜೂರು ಮಾಡುತ್ತೇವೆ. ಆದರೆ ಕಲಘಟಗಿಯ ಬಗ್ಗೆ ನಮಗೆ ಇಲ್ಲಿಯವರೆಗೆ ಪ್ರಸ್ತಾವನೆಯನ್ನೇ ಅವರು ಕಳಿಸಿಲ್ಲ. ಇಲ್ಲಿಯವರೆಗೂ ಬಂದಿಲ್ಲ. ಕೋರ್ಟ್ ಅನ್ನು ಸ್ಥಾಪನೆ ಮಾಡುವುದನ್ನು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಮಾಡಬಾರದು. ನಿಜವಾಗಿ ಎಲ್ಲಿ ಲೋಡ್ ಇದೆ ಅಂತಹ ಕಡೆಗಳಲ್ಲಿ ಮುನ್ಸೀಫ್ ಕೋರ್ಟ್‌ಗಳನ್ನು ಸ್ಥಾಪನೆ ಮಾಡಬೇಕಾದುದು ಯೋಗ್ಯವಾದುದು ಇದ್ದರೆ ಹೈಕೋರ್ಟಿನ ಜೊತೆಯಲ್ಲಿ ನಾನು ಇದನ್ನು ಪ್ರಸ್ತಾಪ ಮಾಡಿ ಅಲ್ಲಿ ಏನಾದರೂ ಯೋಕ್ತವಾದದ್ದು. ಅಂಥದ್ದು ಮತ್ತು ಜಿಲ್ಲಾ ನ್ಯಾಯಾಧೀಶರಿಂದ ಇದರ ಬಗ್ಗೆ ವರದಿ ಏನಾದರೂ ಕಳಿಸಿದ್ದರೆ ಆ ಬಗ್ಗೆ ಹೈಕೋರ್ಟಿನವರು ಪರಿಶೀಲನೆ ಮಾಡಿ ನಮಗೆ ವರದಿ ಕಳುಹಿಸಿಕೊಡುವಂತೆ ನಾನು ಏನಂತೆ ಮಾಡುತ್ತೇನೆ. ಆದರೆ ಅವರಿಗೆ ಆದೇಶ ಕಳಿಸಲಿಕ್ಕೆ ಆಗುವುದಿಲ್ಲ.

ಶ್ರೀ ಪಿ. ಸಿ. ಸಿದ್ದನಗೌಡರ್.—ಅಲ್ಲಿ ಲೋಡ್ ಇದೆ. ಸಾಕಷ್ಟು ಕೇಸ್‌ಗಳು ಇವೆ. ಆದ್ದರಿಂದ ಅಲ್ಲಿ ಮೊಬೈಲ್ ಕೋರ್ಟ್ ಎಂದು ಮಾಡಬಹುದು.

ಅಧ್ಯಕ್ಷರು.—ಅಲ್ಲಿ ಲೋಡ್ ಇದೆಯಾ ?

ಶ್ರೀ ಪಿ. ಸಿ. ಸಿದ್ದನಗೌಡರು.— ಇದೆ.

ಅಧ್ಯಕ್ಷರು.—ಸಾಲದಿದ್ದರೆ ನೀವು ಲೋಡ್ ಮಾಡಿಸಿಕೊಡುತ್ತೀರಾ ?

ಶ್ರೀ ಪಿ. ಸಿ. ಸಿದ್ದನಗೌಡರು.—ಹೌದು.

ಅಧ್ಯಕ್ಷರು.—ಹಾಗಿದ್ದರೆ ಇದನ್ನು ತಾವು ಕನ್ಸಿಡರ್ ಮಾಡಿ. ಶ್ರೀ ವೈ. ಎಂ. ವೀರಣ್ಣನವರು ಈಗ ಪ್ರಶ್ನೆ ಕೇಳಬಹುದು.

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಪುತ್ತೂರು ಬೈಪಾಸ್ ರಸ್ತೆ

೧೫೪. ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ನೀರಾವರಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪುತ್ತೂರು ಬೈಪಾಸ್ ರಸ್ತೆಯು ಅವಶ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಈ ರಸ್ತೆಯ ಕಾರ್ಯವನ್ನು ಆದ್ಯತೆ ಮೇರೆಗೆ ಪ್ರಾರಂಭಿಸಲು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಭೂಸ್ವಾಧೀನತೆಯು ಕೆಲಸವು ಪೂರ್ತಿಯಾಗಿದ್ದು, ಇದಕ್ಕೆ ಆಗತ್ಯವಾದ ೨೯-೧೫ ಎಕ್ರೆ ಖಾಸಗಿ ಸ್ಥಳವನ್ನು ಈಗಾಗಲೇ ಸರಕಾರದ ವಶಕ್ಕೆ ಪಡೆದುಕೊಳ್ಳಲಾಗಿದೆ. ಈ ಬೈಪಾಸ್ ರಸ್ತೆಯ ನಿರ್ಮಾಣದ ಕೆಲಸಕ್ಕಾಗಿ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಹಾಗೂ ಈ ರಸ್ತೆಯ ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ಇತರೆ ಪೂರ್ವಭಾವಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ವಿನಯ ಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ, ಪುತ್ತೂರು ಬೈಪಾಸ್ ರಸ್ತೆ ಜನತೆಯ ಒಂದು ದೊಡ್ಡ ಕನಸಾಗಿದೆ. ಈ ಹಿಂದೆ ಹಲವಾರು ಸಲ ಇದರ ಬಗ್ಗೆ ಈ ಸದನದ ಸಭೆಯಲ್ಲಿ ಬೇರೆ ಬೇರೆ ರೂಪದಲ್ಲಿ ಚರ್ಚೆ ನಡೆದಿದ್ದರೂ ಸಹ ಯಾವುದೇ ರೀತಿಯಾದಂತಹ ಫಲಿತಾಂಶ ಕಂಡು ಬರಲಿಲ್ಲ. ಈಗ ಭೂ ಸ್ವಾಧೀನತೆಯ ಕೆಲಸ ಪೂರ್ತಿಯಾಗಿದೆ ಎಂದು ಮಾನ್ಯ ಕಾಮಗಾರಿ ಮಂತ್ರಿಗಳು ಹೇಳಿದ್ದಾರೆ ಮತ್ತು ಈ ರಸ್ತೆಯ ಕಾಮಗಾರಿಯನ್ನು ತೆಗೆದುಕೊಳ್ಳಲು ಇತರೆ ಪೂರ್ವ ಭಾವಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆಂದು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಇವರು ಲೋಕೋಪಯೋಗಿ

ಮಂತ್ರಿಗಳಾದಂತಹ ಪ್ರಥಮದಲ್ಲಿ ನಮ್ಮ ಜಿಲ್ಲೆಗೆ ಬರುವಂತಹ ಸಂದರ್ಭದಲ್ಲಿ ಈ ಬೈಪಾಸ್ ರಸ್ತೆಗೆ ಅಡಿಗಲ್ಲು ಹಾಕಿ ಮತ್ತೆ ಮುಂದುವರಿಯಬೇಕೆಂದು ಕೇಳಿಕೊಂಡಿದ್ದೆ ಅದಕ್ಕೆ ಅವರು ಆಗ ಒಪ್ಪಿ ಕೊಂಡಿದ್ದರು. ಆದ್ದರಿಂದ ನಮ್ಮ ಜಿಲ್ಲೆಗೆ ಯಾವಾಗ ಪ್ರಥಮ ಪ್ರವಾಸ ಕಾರ್ಯಕ್ರಮವನ್ನು ಹಾಕಿ ಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸನ್ಮಾನ್ಯ ಸದಸ್ಯರು ಒತ್ತಾಯ ಮಾಡಿದ್ದು ನಿಜ. ಕೆಲಸದ ಒತ್ತಡದಿಂದ ಆ ಜಿಲ್ಲೆಗೆ ಹೋಗುವುದಕ್ಕಾಗಲಿಲ್ಲ. ಈ ಅಧಿವೇಶನ ಮುಗಿದ ನಂತರ ಆ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತೇನೆ. ೨೯ ಎಕರೆ ಭೂಮಿ ಭೂ ಸ್ವಾಧೀನ ಆಗಬೇಕಾಗಿತ್ತು. ಅದು ವಿವಿಧ ಹಂತದಲ್ಲಿತ್ತು. ಈಗ ಅದಕ್ಕೆ ೧೫ ಲಕ್ಷ ರೂಪಾಯಿಗಳು ಈಗಾಗಲೇ ಖರ್ಚಾಗಿದೆ. ಇದಕ್ಕೆ ಒಟ್ಟು ೨೧ ಲಕ್ಷ ರೂಪಾಯಿಗಳು ಬೇಕಾಗಿದೆ. ಉಳಿದ ಹಣವನ್ನು ಶೀಘ್ರದಲ್ಲಿ ಕೊಡುತ್ತೇವೆ. ಆ ಭೂಮಿಯನ್ನು ಈಗಾಗಲೇ ಸ್ವಾಧೀನ ತೆಗೆದುಕೊಂಡಿದ್ದೇವೆ. ಅವರಿಗೆ ಶೀಘ್ರದಲ್ಲಿಯೇ ಪರಿಹಾರವನ್ನು ಕೊಡುತ್ತೇವೆ. ಬೈಪಾಸ್ ರಸ್ತೆ ನಿರ್ಮಾಣಕ್ಕೆ ಬೇಕಾದಂತಹ ಎಸ್ಟಿಮೇಟ್ಸ್, ಡಿಸೈನ್ ಅನ್ನು ತಯಾರು ಮಾಡಿ ಮಂಜೂರಾತಿಗೆಂದು ಕೇಂದ್ರಕ್ಕೆ ಕಳಿಸಿದ್ದೇನೆ. ಮಂಜೂರಾತಿ ಶೀಘ್ರದಲ್ಲಿ ಬರುತ್ತದೆ ಎಂಬ ನಿರೀಕ್ಷೆಯಲ್ಲಿದ್ದೇವೆ. ಬಂದನಂತರ ಆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ವಿನಯಕುಮಾರ್ ಸೊರ್ಕೆ.—ಮಾನ್ಯ ಅಧ್ಯಕ್ಷರೆ, ಇದು ರಾಜ್ಯಸರ್ಕಾರದ ರಸ್ತೆಯಾಗಿರುವುದರಿಂದ ಕೇಂದ್ರಸರ್ಕಾರಕ್ಕೆ ಕಳುಹಿಸಬೇಕಾದ ಅವಶ್ಯಕತೆ ಇಲ್ಲ. ಇದರ ಬಗ್ಗೆ ಅಂದಾಜು ಪಟ್ಟಿ ಮೊದಲಾದ ಪೂರ್ವಬಾವಿ ಕೆಲಸಕಾರ್ಯಗಳೆಲ್ಲಾ ನಮಗೆ ತಿಳಿದ ಮಟ್ಟಿಗೆ ಪೂರ್ತಿಯಾಗಿವೆ. ಆದ್ದರಿಂದ ಈ ವರ್ಷವೇ ಈ ಕೆಲಸವನ್ನು ಪ್ರಾರಂಭಮಾಡುವುದಕ್ಕೆ ಮೂರನೇ ಒಂದು ಭಾಗದ ಅನುದಾನವನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈಸಾರಿ ಹಣವನ್ನು ಕೊಡುವುದರ ಮೂಲಕ ಕೆಲಸವನ್ನು ಪ್ರಾರಂಭಮಾಡಿಸುತ್ತೇವೆ.

ಮುಲ್ಕಿಯಲ್ಲಿರುವ ನ್ಯಾಯಾಲಯ

೪೭೩. ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ).— ಮಾನ್ಯ ಯೋಜನಾ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಲ್ಕಿಯಲ್ಲಿದ್ದ ನ್ಯಾಯಾಲಯವನ್ನು ಕಾರ್ಕಳಕ್ಕೆ ಸ್ಥಳಾಂತರ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಇದರಿಂದಾಗಿ ಮುಲ್ಕಿಯ ಜನತೆಗೆ ತೊಂದರೆಯಾಗಿರುವುದು ನಿಜವೆ ?

ಇ) ಹಾಗಿದ್ದಲ್ಲಿ ಈ ನ್ಯಾಯಾಲಯವನ್ನು ಪುನಃ ಮುಲ್ಕಿಗೆ ವರ್ಗಾಯಿಸಲು ಅಥವಾ ಹೊಸ ನ್ಯಾಯಾಲಯವನ್ನು ಪ್ರಾರಂಭಿಸಲು ಸರ್ಕಾರವು ಕ್ರಮ ಕೈಕೊಳ್ಳುವುದೆ ?

ಶ್ರೀ ಎಂ. ವೀರಪ್ಪ ಮೊಯ್ಲಿ (ಯೋಜನಾ, ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳು) —

ಅ) ಬಂದಿಲ್ಲ.

ಆ) ಮೇಲ್ಕಂಡ 'ಅ' ಪ್ರಶ್ನೆಯ ಉತ್ತರದಿಂದ, ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಇ) ಕಾರ್ಕಳದಲ್ಲಿರುವ ನ್ಯಾಯಾಲಯವನ್ನು ಮುಲ್ಕಿಗೆ ವರ್ಗಾಯಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿಲ್ಲ. ಹೊಸ ನ್ಯಾಯಾಲಯವನ್ನು ಮುಲ್ಕಿಯಲ್ಲಿ ಪ್ರಾರಂಭಿಸುವ ಪ್ರಶ್ನೆಯನ್ನು ಪರಿಶೀಲಿಸುತ್ತಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ.—ಮುಲ್ಕಿಯಲ್ಲಿ ಬ್ರಿಟಿಷರ ಕಾಲದಲ್ಲಿ ಒಂದು ನ್ಯಾಯಾಲಯ ಇತ್ತು. ಆದರೆ ಕಾರಣಾಂತರದಿಂದ ಆ ನ್ಯಾಯಾಲಯ ನಿಂತುಹೋಗಿತ್ತು. ಹಿಂದೆ ಮಾನ್ಯ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಮುಲ್ಕಿಯಲ್ಲಿ ಒಂದು ನ್ಯಾಯಾಲಯವನ್ನು ತೆರೆಯಬೇಕೆಂದು ನಿರ್ಧರಿಸಿದರು. ಸ್ಥಳಗಳ ಪರಿಶೀಲನಾ ಕಾರ್ಯವೂ ಕೂಡ ನಡೆದಿತ್ತು. ಆದರೆ ಕಾರಣಾಂತರಗಳಿಂದ ಯೋಗ್ಯ ಕಟ್ಟಡಗಳು ಸಿಕ್ಕದೇ ಹೋದ ಪ್ರಯುಕ್ತ ಈ ನ್ಯಾಯಾಲಯ ಅಲ್ಲಿಗೆ ಬರಲಿಲ್ಲ. ಈಗ ಸಮಯ ಒಳ್ಳೆಯದೂ ಬಂದಿದೆ. ತಾವೇ ಆ ಜಿಲ್ಲೆಯ ಮಂತ್ರಿಗಳಾಗಿದ್ದೀರಿ.